

بسم اللهِ الرّحمٰنِ الرّحيم

**ಅಲ್ಲಾಹನೊಡನೆ ನಮಗಿರುವ ಹಕ್ಕುಗಳನ್ನು ತೀರಿಸುವುದರ ಜೊತೆಗೆ ಅಲ್ಲಾಹನ ದಾಸರ ಹಕ್ಕುಗಳ ಬಗ್ಗೆ ಸಹ ಗಮನ ಹರಿಸಬೇಕಾಗಿದೆ. ರಮಝಾನ್ ತಿಂಗಳಲ್ಲಿ ಅದಕ್ಕಾಗಿ ಹೆಚ್ಚಿನ ಪ್ರಯತ್ನ ಮಾಡಬೇಕಾಗಿದೆ.**

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**26-06-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: "ನಮ್ಮ ಜಮಾಅತಿನವರು ಕೇವಲ ಮಾತಿನಲ್ಲಿ ಸೀಮಿತವಾದರೆ ಸಾಕಾಗಲಾರದು. ಮುಖ್ಯ ಉದ್ದೇಶ ಆತ್ಮ ಪರಿಶುದ್ಧಿ ಮತ್ತು ಸುಧಾರಣೆ ಮಾಡುವುದಾಗಿದೆ. ಅದಕ್ಕೋಸ್ಕರವೇ ಅಲ್ಲಾಹನು ನನ್ನನ್ನು ನಿಯೋಗಿಸಿರುವನು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಯಸುವುದು ನಮ್ಮ ಕರ್ಮಗಳಲ್ಲಿ ಬದಲಾವಣೆ ಉಂಟು ಮಾಡಬೇಕೆಂದಾಗಿದೆ. ನಾವು ಕೇವಲ ಹೇಳಿಕೆಗಳಿಗೆ ನಮ್ಮ ಕೆಲಸವನ್ನು ಸೀಮಿತಗೊಳಿಸಿದರೆ ಸಾಕಾಗಲಾರದು. ನೀವು ನಿಮ್ಮ ಸ್ವಂತ ಲಾಭಕ್ಕೋಸ್ಕರ ನಿಮ್ಮ ಮಾತನ್ನು ಬದಲಾಯಿಸಬಾರದು. ಹಾಗೆ ಮಾಡಿದರೆ ನೀವು ನಿಮ್ಮ ನೈತಿಕ ಮಟ್ಟವನ್ನು ಕಾಪಾಡಲಾರಿರಿ. ನೀವು ವಿಶ್ವಾಸಕ್ಕನುಸಾರವಾಗಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸಿರಿ. ನೀವು ನಿಮ್ಮ ಆತ್ಮಶುದ್ಧೀಕರಣ ಮತ್ತು ಅದನ್ನು ಯಾವಾಗಲೂ ಶುದ್ಧವಾಗಿಡುವುದನ್ನು ನಿಮ್ಮ ಜೀವಿತದ ಭಾಗವಾಗಿ ಮಾಡಿಕೊಳ್ಳಿರಿ. ಹೀಗೆ ಆದರೆ ಮಾತ್ರ ನೀವು ಬೈಅತ್ ಮಾಡಿ ನೀವು ಹೊಂದಿದ ಹೊಣೆಗಾರಿಕೆಗಳನ್ನು ಈಡೇರಿಸುವವರಾಗುವಿರಿ. ಇದೇ ಉದ್ದೇಶಕ್ಕೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಕಳುಹಿಸಿರುವನು. ಆದುದರಿಂದ ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾದುದು ಏನೆಂದರೆ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸಲು, ಅಲ್ಲಾಹನ ಆಜ್ಞೆಗಳ ಕಡೆಗೆ ದೃಷ್ಟಿಯಿರಿಸುವುದು ಆವಶ್ಯಕವಾಗಿದೆ ಮತ್ತು ಅವುಗಳ ಪ್ರಕಾರ ಕೆಲಸಗಳನ್ನು ಮಾಡುವುದು ಆವಶ್ಯಕವಾಗಿದೆ. ಅಲ್ಲಾಹನ ಸಂಪ್ರೀತಿಗಳಿಸುವುದು ನಮ್ಮ ಉದ್ದೇಶವೆಂದು ನಾವು ಯಾವಾಗಲೂ ನೆನಪಿಡಬೇಕು. ನಾನು ಕಳೆದ ವಾರದ ಖುತ್‌ಬದಲ್ಲಿ ಹೇಳಿದ್ದೆ. ನೀವು ನಿಮ್ಮ ಪ್ರಾರ್ಥನೆಗಳ ಅಂಗೀಕಾರದ ದೃಶ್ಯವನ್ನು ನೋಡಲು ಬಯಸುವುದಾದರೆ ಅಲ್ಲಾಹನು ಹೇಳಿದ **–ಫಲ್ ಯಸ್ತಜೀಬೂಲೀ–** (ನನ್ನ ಆಜ್ಞೆಗಳನ್ನು ಪಾಲಿಸಿರಿ) ಎನ್ನುವುದನ್ನು ಈಡೇರಿಸಬೇಕು. ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದು ಹೇಗೆ? ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳೊಂದಿಗೆ ಅಲ್ಲಾಹನ ಆಜ್ಞೆಗಳನ್ನು ಪಾಲಿಸಬೇಕು. ಅಲ್ಲಾಹನ ಆಜ್ಞೆಗಳ ಪ್ರಕಾರ ನಾವು ಜೀವಿಸಬೇಕು. ರಮಝಾನ್ ತಿಂಗಳ ವಿಶಿಷ್ಟವಾದ ಪರಿಸರದಲ್ಲಿ ನಾವು ಅಲ್ಲಾಹನ ಆಜ್ಞೆಗಳನ್ನು ಎಷ್ಟರ ಮಟ್ಟಿಗೆ ನಮ್ಮ ಜೀವಿತದ ಭಾಗಗಳನ್ನಾಗಿ ಮಾಡುತ್ತಿದ್ದೇವೆ ಎಂದು ನೋಡಬೇಕು. ಹೀಗೆ ನಾವು ಮಾಡದಿದ್ದರೆ ನಮ್ಮದೆಲ್ಲವೂ ಕೇವಲ ಬಾಯಿಮಾತಿನ ವಾದಗಳಾಗುವುವು. ನಾವು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತೇವೆಂದು ಬರೇ ಬಾಯಿಮಾತಿನಲ್ಲಿ ಹೇಳುವವರಾಗುವೆವು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಅನೇಕ ಆಜ್ಞೆಗಳನ್ನು ನೀಡಿದ್ದಾನೆ. ಆ ಆಜ್ಞೆಗಳನ್ನು ನಮ್ಮ ಮುಂದೆ ಯಾವಾಗಲೂ ತರುತ್ತಾ ಇರಬೇಕು. ಆಗ ಆತ್ಮಶುದ್ಧಿಯ ಬಗ್ಗೆ ನಾವು ಗಮನಿಸುವವರಾಗುವೆವು. ಆ ಆಜ್ಞೆಗಳಲ್ಲಿ ಕೆಲವನ್ನು ನಾನು ಈಗ ನಿಮ್ಮ ಮುಂದೆ ಪ್ರಸ್ತಾಪಿಸುತ್ತೇನೆ. ಅವು ನಮ್ಮ ಆತ್ಮ ಶುದ್ಧೀಕರಣವನ್ನು ಮಾಡುವುದರ ಜೊತೆಗೆ ಸಮಾಜದಲ್ಲಿ ಪ್ರೀತಿ ಮತ್ತು ಶಾಂತಿಯ ವಾತಾವರಣವನ್ನು ಉಂಟುಮಾಡುತ್ತವೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

وَعِبَادُ الرَّحْمَنِ الَّذِينَ يَمْشُونَ عَلَى الأَرْضِ هَوْنًا وَإِذَا خَاطَبَهُمْ الْجَاهِلُونَ قَالُوا سَلاَمًا

**ವ ಇಬಾದುರ್ರಹ್ಮಾನಿಲ್ಲಝೀನ ಯಮ್‌ಶೂನ ಅಲಲ್ ಅರ್‌ಝಿ ಹೌನನ್ ವ ಇಝಾ ಖಾತಬಹುಮುಲ್ ಜಾಹಿಲೂನ ಖಾಲೂ ಸಲಾಮ.**

ಪರಮ ದಯಾವಂತನ(ಅಲ್ಲಾಹನ) ಭಕ್ತದಾಸರು ಭೂಮಿಯಲ್ಲಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. ಅಜ್ಞಾನಿಗಳಾದ ಜನರು ಅವರನ್ನು ಮಾತಿಗೆಳೆದರೆ ಅವರು "ಸಲಾಮ್" (ಶಾಂತಿ) ಎಂದು ಹೇಳುತ್ತಾರೆ. (ಪವಿತ್ರ ಖುರ್‌ಆನ್ 25: 64)

ಅಲ್ಲಾಹನ ಸತ್ಯಸಂಧರಾದ ದಾಸರು ಭೂಮಿಯ ಮೇಲೆ ಸಾವಧಾನವಾಗಿ ನಡೆದಾಡುತ್ತಾರೆ. ಅವರು ಮೃದುವಾಗಿಯೂ ಗಂಭೀರವಾಗಿಯೂ ನಡೆಯುತ್ತಾರೆ. ಅಂದರೆ ಅಹಂಕಾರ ತೋರಿಸುವುದಿಲ್ಲ. ಅಜ್ಞಾನಿಗಳು ಅವರೊಂದಿಗೆ ಮಾತಿಗಿಳಿದರೆ ಅವರು ಜಗಳ ಮಾಡುವುದಿಲ್ಲ. ನಾವು ನಿಮಗೆ ಶಾಂತಿಯ ಪ್ರಾರ್ಥನೆ ಮಾಡುತ್ತೇವೆ ಎಂದು ಅವರು ಹೇಳುತ್ತಾರೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಉಂಟುಮಾಡಿದ ಬೃಹತ್ತಾದ ಆಧ್ಯಾತ್ಮಿಕ ಕ್ರಾಂತಿಯ ಚಿತ್ರವನ್ನು ಸಂಕ್ಷಿಪ್ತವಾಗಿ ಈ ವಚನದಲ್ಲಿ ಪ್ರಸ್ತಾಪಿಸಲಾಗಿದೆ. ಅವರ ಶಿಷ್ಯರು ಈ ಸ್ವಭಾವಗುಣಗಳನ್ನು ತಮ್ಮಲ್ಲಿ ಉಂಟು ಮಾಡಿದರು. ಆ ಕಾಲಘಟ್ಟ ಅಂಧಕಾರದಲ್ಲಿ ಮುಳುಗಿತ್ತು. ಶೈತಾನನ ಪಂಜದಲ್ಲಿ ಲೋಕ ಹಿಡಿಗೂಡಲ್ಪಟ್ಟಿತ್ತು. ನಾನೆಂಬ ಅಹಂಕಾರ, ಸ್ವಂತ ಇಷ್ಟ, ದುರಹಂಕಾರ, ಕಲಹ, ಹಿಂಸಾಚಾರ ಲೋಕವನ್ನು ವಿನಾಶದ ಹೊಂಡಕ್ಕೆ ಹಾಕಿತ್ತು. ಅಂತಹ ಕಾಲಘಟ್ಟದಲ್ಲಿ ಮನುಷ್ಯರಿಗೆ ಉನ್ನತ ನೈತಿಕ ಗುಣಗಳ ಮತ್ತು ನಮ್ರತೆಯ ಮತ್ತು ವಿನಯದ ಪಾಠ ಕಲಿಸಿದರಲ್ಲದೆ ಎಂತಹ ಮನುಷ್ಯರು ಹುಟ್ಟಿದರೆಂದರೆ ಅವರು ನಾನು ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನದ ಅನುಷ್ಠಾನದ ಚಿತ್ರವಾಗಿದ್ದರು. ಈಗ

ಸಹ ಲೋಕದ ಸ್ಥಿತಿ ಅಂದಿನ ಹಾಗೆಯೇ ಇದೆ. ಈ ಕಾಲಘಟ್ಟದಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿ ಪರಮ ದಯಾವಂತನ ಭಕ್ತದಾಸರ ಜಮಾಅತನ್ನು ಸ್ಥಾಪಿಸಲು ನೇಮಿಸಿದನು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದವರೆಂದು ಹೇಳುವವರಲ್ಲಿ ಪ್ರತಿಯೊಬ್ಬರೂ ಈ ಉನ್ನತ ಮಟ್ಟವನ್ನು ತನ್ನೆದುರಿಗೆ ಇರಿಸಿಕೊಳ್ಳುವುದು ಆವಶ್ಯಕವಾಗಿದೆ. **ಇಬಾದುರ್ರಹ್ಮಾನ್** (ಪರಮ ದಯಾಳುವಾದ ಅಲ್ಲಾಹನ ಭಕ್ತದಾಸರು) ನಮ್ರತೆಯಿಂದಲೂ ವಿನಯವಂತರಾಗಿಯೂ ನಡೆಯುತ್ತಾರೆ. ಅವರು ದುರಹಂಕಾರವಿಲ್ಲದೆ ನಡೆದು ಹೋಗುತ್ತಾರೆ.

ರಮಝಾನ್ ತಿಂಗಳ ಬಗ್ಗೆ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಾಂತರ ನಮಗೆ ತಿಳಿಸಿರುವುದು: ಈ ತಿಂಗಳಲ್ಲಿ ನರಕದ ಬಾಗಿಲು ಮುಚ್ಚಲ್ಪಡುತ್ತವೆ. ಸ್ವರ್ಗದ ಬಾಗಿಲುಗಳು ತೆರೆಯಲ್ಪಡುತ್ತವೆ ಎಂದಾಗಿದೆ. ಅಲ್ಲಾಹನು ಸಹ ದಾಸರ ಸಮೀಪಕ್ಕೆ ಬರುತ್ತಾನೆ. ಅಲ್ಲಾಹನು ಎಲ್ಲ ಸಮಯಗಳಲ್ಲೂ ಎಲ್ಲ ಸ್ಥಳಗಳಲ್ಲೂ ಇದ್ದಾನೆ. ಅಲ್ಲಾಹನು ಕೆಳಗಿನ ಆಕಾಶಕ್ಕೆ ಬರುತ್ತಾನೆ ಎಂದು ಹೇಳಿದುದರ ಅರ್ಥ ಸತ್ಕರ್ಮಗಳಿಗೆ ಹೆಚ್ಚು ಹೆಚ್ಚಾಗಿ ಪ್ರತಿಫಲ ನೀಡುತ್ತಾನೆ ಎಂದಾಗಿದೆ. ಮತ್ತು ಪ್ರಾರ್ಥನೆಗಳನ್ನು ಅಂಗೀಕರಿಸುತ್ತಾನೆಂದಾಗಿದೆ. ಆದುದರಿಂದ ವಿಶ್ವಾಸಿ ಎಂದೂ ನೈಜ ಮುಸ್ಲಿಮನೆಂದೂ ಹೇಳುವ ಪ್ರತಿಯೊಬ್ಬ ಅಹ್ಮದಿ, ಅವನು ಪರಮ ದಯಾವಂತನ ದಾಸನಾಗಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧ ದಾಸನಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿರುವುದರಿಂದ ಅವನು ತನ್ನನ್ನು ಯಾವಾಗಲೂ ಸ್ವಯಂ ಪರಿಶೋಧಿಸುತ್ತಾ ಇರಬೇಕು. ನಮ್ರತೆಯನ್ನು ತೋರಿಸಬೇಕು. ಅಹಂಕಾರವನ್ನು ಕೊನೆಗೊಳಿಸಬೇಕು. ಸಮಾಜದಲ್ಲಿ ಮಾತ್ರವಲ್ಲ ತನ್ನ ಮನೆಯಲ್ಲೂ ತನ್ನ ಪರಿಸರದಲ್ಲಿಯೂ ಜಗಳ ಅಶಾಂತಿಗಳನ್ನು ಕೊನೆಗೊಳಿಸಿ ಶಾಂತಿಯನ್ನು ಹರಡಲು ಪ್ರಯತ್ನಿಸುತ್ತಾ ಇರಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇದಕ್ಕೆ ಸಂಬಂಧಿಸಿ ತನ್ನ ಉತ್ತಮ ಜೀವಿತ ಮಾದರಿಯನ್ನು ನಮಗೆ ತೋರಿಸಿಕೊಟ್ಟಿದ್ದಾರೆ. ವಿವಿಧ ಸಂಧರ್ಭಗಳಲ್ಲಿ ಉಪದೇಶಗಳನ್ನು ನೀಡಿದ್ದಾರೆ. ಅವರು ಹೇಳಿರುವರು: ಅಲ್ಲಾಹನು ನನ್ನೊಂದಿಗೆ ಹೀಗೆ ಹೇಳಿದ್ದಾನೆ– ಯಾರೂ ಇನ್ನೊಬ್ಬನ ಮೇಲೆ ಅಹಂಭಾವದಿಂದ ವರ್ತಿಸದಿರುವ ಹಾಗೆ ವಿನಯದಿಂದ ವರ್ತಿಸಬೇಕು.

ಒಮ್ಮೆ ಒಬ್ಬ ಯಹೂದಿ ಹಝ್ರತ್ ಮೂಸಾ ಅಲೈಹಿಸ್ಸಲಾಮರು ಶ್ರೇಷ್ಠರೆಂದು ಹೇಳಿದಾಗ ಒಬ್ಬ ಮುಸ್ಲಿಮ್, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಎಲ್ಲರಿಗಿಂತ ಮೇಲಿದೆ ಎಂದು ಹೇಳಿದರು. ಆಗ ಆ ಯಹೂದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ದೂರಿತ್ತನು. "ನನಗೆ ಮುಸ್ಲಿಮನು ಹೇಳಿದ ಮಾತಿನಿಂದ ನೋವಾಗಿದೆ" ಎಂದು ಹೇಳಿದನು. ಆಗ, ಎಲ್ಲ ಪ್ರವಾದಿಗಳ ನಾಯಕರಾಗಿದ್ದ ಆ ಮಹಾನುಭಾವರು ಹೇಳಿದರು: "ನನಗೆ ಮೂಸಾ ಪ್ರವಾದಿಯ ಮೇಲೆ ಶ್ರೇಷ್ಠತೆ ಇದೆ ಎಂದು ಹೇಳಬೇಡಿರಿ" ಎಂದು ಹೇಳಿದರು. ಇದು ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಸಹಾಯಕವಾದ ಬೃಹತ್ತಾದ ಉತ್ತಮ ನಡತೆಯ ಮಾದರಿಯಾಗಿದೆ. ಇದು, ಶಾಂತಿಯ ದೊರೆಯಾಗಿದ್ದ ಅವರ ವಿರುದ್ಧ ದೋಷಾರೋಪ ಮಾಡುವವರಿಗಿರುವ ಉತ್ತರವಾಗಿದೆ. ಅಂದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾರಣದಿಂದ ಲೋಕದಲ್ಲಿ ಶಾಂತಿ ಕೆಟ್ಟು ಹೋಗುತ್ತಿದೆ ಎಂದು ಆರೋಪಿಸುವವರಿಗೆ ಇದು ಉತ್ತರವಾಗಿದೆ. ಅದೇ ರೀತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಾಮದಲ್ಲಿ ದೌರ್ಜನ್ಯದಿಂದಲೂ ಬರ್ಬರತೆಯಿಂದಲೂ ವರ್ತಿಸುವ ಜನರಿಗೆ ಸಹ ಇದರಲ್ಲಿ ಪಾಠವಿದೆ.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರೆಂದು ವಾದಿಸುವವರಾಗಿದ್ದೇವೆ. ಲೋಕದಲ್ಲಿ ಈ ರೀತಿ ದೋಷಾರೋಪ ಮಾಡುವವರ ಆರೋಪಗಳಿಗೆ ಉತ್ತರ ನೀಡುವ ಜವಾಬ್ದಾರಿ ನಮ್ಮ ಮೇಲಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಉಪದೇಶ ನೀಡುತ್ತಾ ಈರೀತಿ ಹೇಳಿದರು: "ನಾನು ನನ್ನ ಜಮಾಅತಿಗೆ ಉಪದೇಶಿಸುತ್ತೇನೆ. ನೀವು ಅಹಂಕಾರದಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಏಕೆಂದರೆ ಅಹಂಕಾರ ನಮ್ಮ ಪ್ರತಾಪಶಾಲಿಯಾದ ದೇವನ ದೃಷ್ಟಿಯಲ್ಲಿ ಅತ್ಯಂತ ಹೆಚ್ಚು ಅಸಹ್ಯವಾಗಿದೆ. ಒಬ್ಬನು ತನ್ನ ಸಹೋದರನ ಮಾತುಗಳನ್ನು ಶ್ರದ್ಧೆಯಿಟ್ಟು ಆಲಿಸದೆ ಮುಖತಿರುಗಿಸುವನಾದರೆ ಅವನು ಸಹ ಅಹಂಕಾರದ ಪಾಲು ತೆಗೆದುಕೊಂಡವನಾಗಿದ್ದಾನೆ. ನೀವು ನಾಶವಾಗದಿರಲು ಮತ್ತು ನೀವು ನಿಮ್ಮ ಕುಟುಂಬದವರೊಂದಿಗೆ ಮೋಕ್ಷ ಪಡೆಯಲು ನಿಮ್ಮಲ್ಲಿ ಅಹಂಕಾರದ ಒಂದಂಶ ಸಹ ಇಲ್ಲದಂತಾಗಲು ಪ್ರಯತ್ನಿಸಿರಿ. ನೀವು ದೇವನ ಕಡೆಗೆ ಬಾಗಿರಿ. ಲೋಕದಲ್ಲಿ ಮನುಷ್ಯನಿಗೆ ಯಾರೊಂದಿಗಾದರೂ ಎಷ್ಟು ಪ್ರೀತಿ ಹೊಂದಲು ಸಾಧ್ಯವೋ ಅಷ್ಟು ಪ್ರೀತಿಯನ್ನು ನೀವು ದೇವನ ಬಗ್ಗೆ ಹೊಂದಿರಿ. ಯಾರನ್ನಾದರೂ ಎಷ್ಟು ಹೆಚ್ಚು ಪ್ರೀತಿಸಲು ಸಾಧ್ಯವೋ ಅಷ್ಟು ಹೆಚ್ಚಾಗಿ ನೀವು ದೇವನನ್ನು ಪ್ರೀತಿಸಿರಿ. ನೀವು ಲೋಕದಲ್ಲಿ ಯಾರನ್ನಾದರೂ ಎಷ್ಟು ಹೆಚ್ಚು ಭಯಪಡಲು ಸಾಧ್ಯವೋ ಅಷ್ಟು ಹೆಚ್ಚು ಭಯವನ್ನು ದೇವನ ಬಗ್ಗೆ ಹೊಂದಿರಿ. ಪರಿಶುದ್ಧ ಹೃದಯಿಗಳಾಗಿರಿ. ಪರಿಶುದ್ಧ ನಿರ್ಧಾರ ಮಾಡುವವರಾಗಿರಿ. ನೀವು ನಿರಾಡಂಬರತೆಯನ್ನೂ ವಿನಯವನ್ನೂ ಸ್ವಾಯತ್ತ ಮಾಡಿಕೊಳ್ಳಿರಿ. ಯಾರಿಗೂ ಕೆಡುಕನ್ನು ಉಂಟುಮಾಡದ ಸ್ಥಿತಿಯನ್ನು ಹೊಂದಿರಿ. ಆಗ ದೇವನು ನಿಮ್ಮ ಮೇಲೆ ದಯೆದೋರುವನು. ಈ ಸ್ಥಿತಿಯನ್ನು ನಮ್ಮ ಪೈಕಿ ಪ್ರತಿಯೊಬ್ಬನು ತನ್ನೊಳಗೆ ಉಂಟುಮಾಡಬೇಕಾಗಿದೆ. ಈ ದಿನಗಳಲ್ಲಿ ನೀವು ನಿಮ್ಮ ಪ್ರತಿಯೊಂದು ರೀತಿಯ ಅಹಂಭಾವವನ್ನು ಕೊನೆಗೊಳಿಸಲು

ಪ್ರಯತ್ನಿಸಬೇಕಾಗಿದೆ. ಶಾಂತಿ ಸಮಾಧಾನಗಳನ್ನು ಹರಡಲು ಪ್ರಯತ್ನ ಮಾಡಬೇಕಾಗಿದೆ. ಅದರ ಬಗ್ಗೆ ಪ್ರಾರ್ಥನೆಯನ್ನೂ ಸಹ ಮಾಡಬೇಕಾಗಿದೆ. ನೀವು ಕೇವಲ ನಿಮ್ಮ ಸ್ವಂತ ಅಭಿಲಾಷೆಗಳನ್ನು ಮಾತ್ರ ಈಡೇರಿಸಲು ಅಲ್ಲಾಹನ ಕಡೆಗೆ ಬಾಗದಿರಿ. ನೀವು ನಿಷ್ಕಾಪೂರ್ಣವಾಗಿ ಅವನ ಕಡೆಗೆ ಬಾಗಿರಿ. ಹಾಗೆ ಬಾಗುವವನಿಗೆ ಯಾವುದೇ ಕಷ್ಟ ಇರಲಾರದು. ಪ್ರತಿಯೊಂದು ಕಷ್ಟದ ಸ್ಥಿತಿಯಲ್ಲಿ ತಾನಾಗಿಯೇ ಅವನಿಗೆ ದಾರಿ ತೆರೆಯಲ್ಪಡುತ್ತದೆ. ಅಲ್ಲಾಹನು ಸ್ವತಃ ಹೀಗೆ ಹೇಳಿದ್ದಾನೆ:

وَمَنْ يَتَّقِ اللَّهَ يَجْعَلْ لَهُ مَخْرَجًا
وَيَرْزُقْهُ مِنْ حَيْثُ لاَ يَحْتَسِب

**ವ ಮನ್ ಯತ್ತಖಿಲ್ಲಾಹ ಯಜ್ಅಲ್ ಲಹೂ ಮಖ್‌ರಜನ್ ವ ಯರ್‌ಝುಖುಹು ಮಿನ್ ಹೈಸು ಲಾ ಯಹ್‌ತಸಿಬ್.**

ಯಾರಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅವನಿಗೆ ಅಲ್ಲಾಹನು (ಸಂಕಷ್ಟಗಳಿಂದ) ಪಾರಾಗುವ ಮಾರ್ಗವನ್ನು ಮಾಡಿಕೊಡುವನು. ಅವನು ನಿರೀಕ್ಷಿಸದ ಕಡೆಯಿಂದ ಅಲ್ಲಾಹನು ಅವನಿಗೆ ಜೀವನೋಪಾಯವನ್ನು ದಯಪಾಲಿಸುವನು. (65: 3,4)

ಇಲ್ಲಿ ಜೀವನೋಪಾಯ ಎಂದು ಹೇಳಿದುದು ಕೇವಲ ಆಹಾರ ಮಾತ್ರವಲ್ಲ, ವಿದ್ಯೆ, ಗೌರವ ಮೊದಲಾದ ಮನುಷ್ಯನಿಗೆ ಆವಶ್ಯಕವಾಗಿರುವ ಎಲ್ಲವೂ ಸೇರಿವೆ. ಅಲ್ಲಾಹನೊಂದಿಗೆ ಸ್ವಲ್ಪಮಟ್ಟಿಗಾದರೂ ಸಂಬಂಧ ಸ್ಥಾಪಿಸುವವನು ಎಂದೂ ವ್ಯರ್ಥವಾಗಲಾರನು.

ಅಲ್ಲಾಹನ ಅನುಗ್ರಹದಿಂದ ನಮ್ಮಲ್ಲಿ ಪರಿಶುದ್ಧವಾದ ಬದಲಾವಣೆಗಳನ್ನು ಉಂಟುಮಾಡಲು ಮತ್ತು ಪ್ರಾರ್ಥನೆಗಳನ್ನು ಅಂಗೀಕರಿಸಲು ಅಲ್ಲಾಹನು ಈ ದಿನಗಳನ್ನು ನಮಗೆ ಒದಗಿಸಿಕೊಟ್ಟಿದ್ದಾನೆ. ಈ ದಿನಗಳಲ್ಲಿ ಈ ವಿಷಯಗಳ ಕಡೆಗೆ ಗಮನ ನೀಡುವ ಆವಶ್ಯಕತೆ ಇದೆ. ಯಾರ್‍ಯಾರಿಗೆ ಯಾವ್ಯಾವ ವಿಷಯಗಳ ಬಗ್ಗೆ ಹೆಮ್ಮೆ ಇದೆ, ಅಥವಾ ಯಾವುದು ನಮ್ಮ ವಿನಯಭರಿತ ನಡೆವಳಿಕೆಗಳಿಗೆ ಅಡ್ಡಿಯಾಗಿದೆ, ಅಥವಾ ನಮ್ಮ ಕಾರಣದಿಂದ ನಮ್ಮ ಸಮಾಜದಲ್ಲಿ ಅಶಾಂತಿ ಮತ್ತು ಹಿಂಸೆಗೆ ಕಾರಣವಾಗುವ ಯಾವ್ಯಾವ ವಸ್ತುಗಳಿವೆ ಅವುಗಳೆನ್ನೆಲ್ಲಾ ಅಲ್ಲಾಹನ ಮುಂದೆ ಬಾಗುತ್ತಾ ಅವನ ಸಹಾಯ ಬೇಡಿಕೊಂಡು ನಮ್ಮಿಂದ ದೂರಸರಿಸಲು ಪ್ರಯತ್ನಮಾಡಬೇಕಾಗಿದೆ. ನಾವು ಪ್ರತಿಯೊಂದು ಸ್ಥಳದಲ್ಲಿ ಶಾಂತಿ ಸಮಾಧಾನಗಳನ್ನು ಹರಡುವವರಾಗಬೇಕು ನಾವು ಅಶಾಂತಿ ಮತ್ತು ಕಲಹ ಹಬ್ಬಿಸುವವರಾಗಬಾರದು.

ಹಕ್ಕುಗಳನ್ನು ಈಡೇರಿಸಿಕೊಡುವುದು, ಶಾಂತಿಯನ್ನು ಹರಡುವುದು, ಅಹಂಕಾರದಿಂದ ರಕ್ಷಣೆ ಪಡೆಯುವುದು ಇವುಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಬೇರೆ ಒಂದು ಸ್ಥಳದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

وَاعْبُدُوا اللَّهَ وَلاَ تُشْرِكُوا بِهِ شَيْئًا وَبِالْوَالِدَيْنِ إِحْسَانًا وَبِذِي
الْقُرْبَى وَالْيَتَامَى وَالْمَسَاكِينِ وَالْجَارِ ذِي الْقُرْبَى وَالْجَارِ الْجُنُبِ
وَالصَّاحِبِ بِالْجَنْبِ وَابْنِ السَّبِيلِ وَمَا مَلَكَتْ أَيْمَانُكُمْ إِنَّ اللَّهَ لاَ
يُحِبُّ مَنْ كَانَ مُخْتَالاً فَخُورًا

**ವಅ್‌ಬುದುಲ್ಲಾಹ ವಲಾ ತುಶ್‌ರಿಕೂ ಬಿಹೀ ಶೈಅನ್ ವಬಿಲ್ ವಾಲಿದೈನಿ ಇಹ್‌ಸಾನ ವಬಿ ಝಿಲ್‌ಖುರ್‌ಬಾ ವಲ್ ಯತಾಮಾ ವಲ್ ಮಸಾಕೀನಿ ವಲ್ ಜಾರಿಝಿಲ್ ಖುರ್‌ಬಾ ವಲ್ ಜಾರಿಲ್ ಜುನುಬಿ ವಸ್ಸಾಹಿಬಿ ಬಿಲ್‌ಜಂಬಿ ವಬ್‌ನಿಸ್ಸಬೀಲಿ ವಮಾ ಮಲಕತ್ ಅಯ್‌ಮಾನುಕುಮ್ ಇನ್ನಲ್ಲಾಹ ಲಾ ಯುಹಿಬ್ಬು ಮನ್‌ಕಾನ ಮುಖ್‌ತಾಲನ್ ಫಖೂರ.**

ನೀವು ಅಲ್ಲಾಹನನ್ನು ಆರಾಧಿಸಿರಿ; ಬೇರೇನನ್ನೂ ಅವನಿಗೆ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ – ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ (ಒಳಿತನ್ನು ಮಾಡಿರಿ). ಅಹಂಭಾವಿಗಳನ್ನೂ ಜಂಭಕೊಚ್ಚುವವರನ್ನೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ. (4: 37)

ಈ ವಚನದಲ್ಲಿ ಅಲ್ಲಾಹನ ಆರಾಧನೆ ಬಗ್ಗೆ ಹೇಳಿ ಬಹುದೇವಾರಾಧನೆಯನ್ನು ತಡೆದ ನಂತರ ಕೆಲವು ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ರಮಝಾನ್ ತಿಂಗಳು ಆರಾಧನೆಗಳ ಬಗ್ಗೆ ಗಮನ ಹರಿಸುವ ತಿಂಗಳಾಗಿದೆ ಮಾತ್ರವಲ್ಲ ಕೆಲವು ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆಯೂ ಗಮನ ಹರಿಸಬೇಕಾದ ತಿಂಗಳಾಗಿದೆ. ಈ ತಿಂಗಳಲ್ಲಿ ಈ ಹಕ್ಕುಗಳನ್ನು ಈಡೇರಿಸಿಕೊಡುವುದು ಸತ್ಯವಿಶ್ವಾಸಿಗೆ ಕಡ್ಡಾಯ ಕರ್ಮವಾಗಿದೆ. ಈ ದಿನಗಳಲ್ಲಿ ಇದರ ಅಭ್ಯಾಸವಾಗಬೇಕು. ವಾಸ್ತವಿಕವಾಗಿ ಇವು ಯಾವಾಗಲೂ ಈಡೇರಿಸಬೇಕಾದ ಹಕ್ಕುಗಳಾಗಿವೆ. ಈ ತಿಂಗಳಲ್ಲಿ ನಾವು ಇವುಗಳೆನ್ನೆಲ್ಲಾ ರೂಢಿ ಮಾಡಿಕೊಳ್ಳಬಹುದಾಗಿವೆ. ಈ ಹಕ್ಕುಗಳನ್ನು ಈಡೇರಿಸಿಕೊಡದಿದ್ದರೆ ಕೇವಲ ಆರಾಧನೆಗಳು ಸತ್ಯ ವಿಶ್ವಾಸಿಗೆ ರಮಝಾನಿನ ಉದ್ದೇಶ ಲಕ್ಷ್ಯಗಳು ಗಳಿಸುವಂತೆ ಮಾಡಲಾರವು. ರಮಝಾನಿನ ಮೂಲ ಉದ್ದೇಶ ನಮ್ಮಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಿ ಅದನ್ನು ಜೀವನದ ಭಾಗವನ್ನಾಗಿ ಮಾಡಿಕೊಳ್ಳುವುದಾಗಿದೆ. ನಾವು ಈ ತಿಂಗಳಲ್ಲಿ ಅನುಷ್ಠಿಸುವ ಆರಾಧನೆಗಳನ್ನು ನಮ್ಮ ಜೀವನದ ಸ್ಥಿರ ಭಾಗಗಳನ್ನಾಗಿ ಮಾಡಬೇಕು. ನಾವು ಈ ತಿಂಗಳಲ್ಲಿ ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡುವುದಾದರೆ ಅದನ್ನು ಸ್ಥಿರವಾಗಿ ನಮ್ಮ ಜೀವಿತದ ಭಾಗವನ್ನಾಗಿ ಮಾಡಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಡವರಿಗೆ ಮತ್ತು ನಿರ್ಗತಿಕರಿಗೆ ಸಹಾಯ ನೀಡಲು ತಮ್ಮ ಕೈಗಳನ್ನು ಹೇಗೆ ಬಳಸುತ್ತಿದ್ದರೆಂದರೆ, ಈ ತಿಂಗಳಲ್ಲಿ ಅವರ ಔದಾರ್ಯ ಬಿರುಗಾಳಿಗಿಂತ ವೇಗವಾಗಿರುತ್ತಿತ್ತು. ಸಾಮಾನ್ಯ ದಿನಗಳಲ್ಲೂ ಅವರ ಔದಾರ್ಯ ಎಷ್ಟು ಉನ್ನತ ಮಟ್ಟದಾಗಿತ್ತೆಂದರೆ ಬೇರೆ ಯಾರೂ ಅದನ್ನು ತಲಪಲು ಸಾಧ್ಯವಿರಲಿಲ್ಲ. ರಮಝಾನಿನಲ್ಲಿ ಅವರು ಮಾಡುತ್ತಿದ್ದ ಔದಾರ್ಯದ ಬಗ್ಗೆ ಬಿರುಗಾಳಿಯ ಉದಾಹರಣೆ ನೀಡಲಾಗಿದೆ. ಅದಕ್ಕಿಂತ ಉತ್ತಮ ಉದಾಹರಣೆ ಬೇರೆ ಇಲ್ಲ. ಬಡವರ ಹಕ್ಕುಗಳನ್ನು ಈಡೇರಿಸಿಕೊಡುವುದರಲ್ಲಿ ಅವರು ಅತ್ಯುನ್ನತ ಮಾದರಿಯನ್ನು ಸ್ಥಾಪಿಸಿದರು.

ಅಲ್ಲಾಹನು ತನ್ನನ್ನು ಆರಾಧಿಸುವ ಆರಾಧಕನಿಂದ ಈ ಎಲ್ಲಾ ಉನ್ನತ ನೈತಿಕ ಗುಣಗಳನ್ನು ಪ್ರತೀಕ್ಷಿಸುತ್ತಾನೆ. ಅದರ ಬಗ್ಗೆ ಆಜ್ಞೆ ನೀಡುತ್ತಾನೆ. ಆ ಆಜ್ಞೆಯನ್ನು ವಿನಯಭಾವದಿಂದ ಸತ್ಯವಿಶ್ವಾಸಿ ಪಾಲಿಸಬೇಕಾಗಿದೆ. ಈ ಹಕ್ಕುಗಳನ್ನು ಈಡೇರಿಸಿಕೊಡುವುದು ಸಹ ಬಹಳ ದೊಡ್ಡ ಹೆಮ್ಮೆ ಕೊಚ್ಚುವಿಕೆಯಾಗಿದೆ ಎಂದು ಯಾರಾದರೂ ಭಾವಿಸದಿರಲಿ. ಹಕ್ಕುಗಳನ್ನು ಈಡೇರಿಸುವುದರಲ್ಲಿ ಹೆಮ್ಮೆ ಪಡುವಂತಹ ಏನೂ ಇರುವುದಿಲ್ಲ. ಅದು ಸತ್ಯವಿಶ್ವಾಸಿಗೆ ಕಡ್ಡಾಯವಾದುದಾಗಿದೆ. ಹಕ್ಕುಗಳನ್ನು ಈಡೇರಿಸಿ ಕೊಡುವುದರಿಂದಲೇ ಆರಾಧನೆಗಳು ಸಹ ಅಂಗೀಕರಿಸಲ್ಪಡುತ್ತವೆ. ಮೇಲೆ ಉದ್ಧರಿಸಿದ ವಚನದಿಂದ ಸ್ಪಷ್ಟವಾಗುವುದೇನೆಂದರೆ ಈಡೇರಿಸಿಕೊಡಬೇಕಾದ ಹಕ್ಕುಗಳಲ್ಲಿ ಮಾತಾಪಿತರ ಹಕ್ಕುಗಳಿವೆ, ಸಂಬಂಧಿಕರ ಹಕ್ಕುಗಳಿವೆ, ಅನಾಥರ ಹಕ್ಕುಗಳಿವೆ, ನಿರ್ಗತಿಕರ ಹಕ್ಕುಗಳಿವೆ, ಸಂಬಂಧಿಕರಾದ ನೆರೆಹೊರೆಯವರ ಹಕ್ಕುಗಳಿವೆ, ಸಂಬಂಧಿಕರಲ್ಲದ ನೆರೆಹೊರೆಯವರ ಹಕ್ಕುಗಳಿವೆ. ವಿವಿಧ ಸಂದರ್ಭಗಳಲ್ಲಿ ಒಟ್ಟಿಗೆ ಇರುವವರೂ ಒಟ್ಟಿಗೆ ಕುಳಿತುಕೊಳ್ಳುವ ಜನರ ಹಕ್ಕುಗಳು ಸಹ ಇವೆ. ಪ್ರಯಾಣಿಕರ ಹಕ್ಕುಗಳಿವೆ. ನಮ್ಮ ಅಧೀನವಿರುವವರ ಮತ್ತು ನಮ್ಮನ್ನು ಅವಲಂಬಿಸಿರುವವರ ಹಕ್ಕುಗಳಿವೆ. ಪವಿತ್ರ ಖುರ್‌ಆನಿನ ಈ ವಚನದಲ್ಲಿ ಎಲ್ಲ ಮಾನವೀಯತೆಯನ್ನು ಗಮನಿಸಿ ಮಾನವರೆಲ್ಲರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಗಮನ ಹರಿಸಲಾಗಿದೆ. ಮಾತ್ರವಲ್ಲ ಆ ಬಗ್ಗೆ ಆಜ್ಞೆಯನ್ನೂ ನೀಡಲಾಗಿದೆ. ಮಾತಪಿತರ ಹಕ್ಕುಗಳ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಬೇರೆ ವಚನಗಳಲ್ಲೂ ಪ್ರಸ್ತಾಪಿಸಲಾಗಿದೆ. ವೃದ್ಧರಾದ ಅವರ ಬಗ್ಗೆ ಲಕ್ಷ್ಯ ನೀಡುವುದು ಮಕ್ಕಳ ಕಡ್ಡಾಯ ಕರ್ತವ್ಯವಾಗಿದೆ. ಇದೊಂದು ಉಪಕಾರವಲ್ಲ. ಅದು ಅವರ ಹಕ್ಕು ಆಗಿದೆ. ಸಂಬಂಧಿಕರಿಗೂ ಹಕ್ಕುಗಳಿವೆ. ಪತಿ ಪತ್ನಿಯರು ಪರಸ್ಪರ ಒಬ್ಬರಿನ್ನೊಬ್ಬರ ಸಂಬಂಧಿಕರ ಹಕ್ಕುಗಳನ್ನು ಈಡೇರಿಸಿಕೊಡುವುದಾದರೆ ಅತ್ತೆ ಮಾವಂದಿರ ಹಕ್ಕುಗಳನ್ನು ಈಡೇರಿಸಿಕೊಡುತ್ತಾ ಇದ್ದರೆ ಮನೆಗಳಲ್ಲಿರುವ ಅನೇಕ ಜಗಳಗಳು ಕೊನೆಗೊಳ್ಳುವುವು. ರಕ್ತ ಸಂಬಂಧಿಗಳ ಹಕ್ಕುಗಳನ್ನು ಗಮನಿಸಿ ಎಂದು ಅಲ್ಲಾಹನು ಹೇಳಿದ್ದಾನೆ. ಅವುಗಳ ಬಗ್ಗೆ ಸಹ ಗಮನ ಕೊಡಬೇಕಾಗಿದೆ. ಆಗ ಮಾತ್ರ ಪ್ರೀತಿ ವಾತ್ಸಲ್ಯಗಳ ವಾತಾವರಣ ಉಂಟಾಗುವುದು. ಯಾವ್ಯಾವ ಮನೆಗಳಲ್ಲಿ ಇಂತಹ ಜಗಳಗಳಿವೆಯೋ ಅವುಗಳಲ್ಲಿ ಅನೇಕ ವಿಷಯಗಳಿರುತ್ತವೆ. ಅವುಗಳ ಬಗ್ಗೆ ಈ ದಿನಗಳಲ್ಲಿ ವಿಶಿಷ್ಟವಾಗಿ ಚಿಂತಿಸಬೇಕು. ಹಠ ಮತ್ತು ಅಹಂಭಾವವನ್ನು ಬಿಟ್ಟು ಉತ್ತಮ ರೀತಿಯಲ್ಲಿ ಸಂಸಾರ ನಡೆಸುವ ಪ್ರಯತ್ನ ಮಾಡಬೇಕು.

ಅದೇ ರೀತಿ ಅನಾಥರ ಸಂರಕ್ಷಣೆ ಸಹ ಬಹಳ ಮುಖ್ಯ ಕರ್ತವ್ಯವಾಗಿದೆ. ಅವರನ್ನು ಸಮಾಜಕ್ಕೆ ಪ್ರಯೋಜನಕರವಾಗುವಂತೆ ಮಾಡಬೇಕು. ಅವರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಷ್ಟು ಪ್ರಾಮುಖ್ಯತೆ ನೀಡಿದ್ದಾರೆಂದರೆ ಅವರು ಹೇಳಿದರು: ನಾನು ಮತ್ತು ಅನಾಥರನ್ನು ಸಂರಕ್ಷಿಸುವವನು ಸ್ವರ್ಗದಲ್ಲಿ ಎರಡು ಬೆರಳುಗಳು ಜೊತೆಯಾಗಿರುವಂತೆ ಇರುವೆವು. ಎಂದರೆ ನಾವು ಬಹಳ ಸಮೀಪವಾಗಿರುವೆವು. ಆದುದರಿಂದ ಈ ಮುಖ್ಯ ವಿಷಯವನ್ನು ನಮ್ಮ ಜಮಾಅತಿನ ಜನರು ಯಾವಾಗಲೂ ನೆನಪಿಟ್ಟುಕೊಳ್ಳಬೇಕು ಮತ್ತು ಅನಾಥರ ಸಂರಕ್ಷಣೆಗೋಸ್ಕರ ಖರ್ಚು ಮಾಡಬೇಕು. ಜಮಾಅತ್ ಮೂಲಕ ಸಹ ಇದರ ವ್ಯವಸ್ಥೆ ಮಾಡಲಾಗಿದೆ. ಬಡವರ ಹಕ್ಕುಗಳಲ್ಲಿ ಅವರಿಗೆ ವಿದ್ಯಾಭ್ಯಾಸ ನೀಡಲು ಖರ್ಚು ಮತ್ತು ಚಿಕಿತ್ಸೆಗೆ ಖರ್ಚು, ವಿವಾಹಕ್ಕೆ ಖರ್ಚು ಮೊದಲಾದವುಗಳಿವೆ. ಈ ಖರ್ಚುಗಳನ್ನು ಮಾಡಲು ಜಮಾಅತಿನಲ್ಲಿ ಬೇರೆ ಫಂಡ್‌ಗಳಿವೆ. ಯಾರಿಗೆ ಖರ್ಚು ಮಾಡುವ ಸಾಮರ್ಥ್ಯವಿದೆಯೋ ಅವರು ಜಮಾಅತ್ ವ್ಯವಸ್ಥೆ ಮೂಲಕ ಖರ್ಚು ಮಾಡಬೇಕು.

ಇದು ಪ್ರೀತಿ ವಾತ್ಸಲ್ಯಗಳನ್ನು ವ್ಯಾಪಿಸುವ ಇಸ್ಲಾಮಿನ ಸುಂದರ ಉಪದೇಶಗಳಾಗಿವೆ. ಇವು ಸೌಹಾರ್ದಕ್ಕೆ ಮತ್ತು ಐಕ್ಯತೆಗೆ ಅಸ್ತಿಭಾರ ಹಾಕುತ್ತವೆ. ಸಮಾಜದಲ್ಲಿ ಶಾಂತಿ ಸಮಾಧಾನ ಸ್ಥಾಪಿತವಾಗುತ್ತವೆ. ಅದೇರೀತಿ ನಿಕಟ ಸಂಗಡಿಗರ ಮತ್ತು ಯಾತ್ರಿಕರ ಹಕ್ಕುಗಳ ಬಗ್ಗೆ ಸಹ ಹೇಳಲಾಗಿದೆ. ಈ ಪದಗಳು ಪತಿ ಪತ್ನಿಯರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಮಾತ್ರವಲ್ಲ ಸ್ನೇಹಿತರಿಗೆ ಮತ್ತು ಜೊತೆಗೆ ಕೆಲಸ ಮಾಡುವವರ ಹಕ್ಕುಗಳಿಗೂ ಅನ್ವಯವಾಗುವಂತೆ ಮಾಡಿರುತ್ತದೆ. ಅವು ಅಧಿಕಾರಿಗಳ ಮತ್ತು ಅದರ ಅಧೀನದಲ್ಲಿರುವ ಹಕ್ಕುಗಳಿಗೂ ಸಂಬಂಧಿಸಿವೆ. **ಮಾ ಮಲಕತ್ ಅಯ್‌ಮಾನುಕುಮ್** (ನಿಮ್ಮ ಅಧೀನದಲ್ಲಿರುವವರಿಗೆ) ಎಂದು ಹೇಳಿ ಎಲ್ಲ ರೀತಿಯ ಅಧೀನದಲ್ಲಿರುವವರ ಹಕ್ಕುಗಳ ಬಗ್ಗೆ ಗಮನ ಸೆಳೆಯಲಾಗಿದೆ. ಅವರ ಎಲ್ಲ ಹಕ್ಕುಗಳನ್ನು ಈಡೇರಿಸಿಕೊಡಲು ಹೇಳಲಾಗಿದೆ. ಈ ಹಕ್ಕುಗಳನ್ನು ನೀವು ಈಡೇರಿಸಿಕೊಡುವುದಿಲ್ಲವಾದರೆ, ನೀವು ಬಹಳ ಅಹಂಭಾವಿಗಳು ಎಂದರ್ಥ. ಅದು ಅಲ್ಲಾಹನಿಗೆ ತೀರಾ ಇಷ್ಟವಿಲ್ಲದ ಸಂಗತಿಯಾಗಿದೆ.

ಇವು, ಲೋಕದಲ್ಲಿ ಶಾಂತಿ ಸ್ಥಾಪಿಸಲು, ಸುರಕ್ಷೆಯನ್ನು ವ್ಯಾಪಿಸಲು, ಪ್ರತಿಯೊಂದು ವರ್ಗದವರ ಹಕ್ಕುಗಳನ್ನು ಸ್ಥಾಪಿಸಲು ಇಸ್ಲಾಮ್ ಧರ್ಮ ನೀಡುವ ಸುಂದರ ಉಪದೇಶಗಳಾಗಿವೆ. ನಮಗೆ ಲಭಿಸಿರುವ ಈ ದಿನಗಳು ಅಲ್ಲಾಹನಿಗೆ ಸಮೀಪವಾಗಲಿರುವ ದಿನಗಳಾಗಿವೆ. ಅಲ್ಲಾಹನೇ ಸ್ವತಃ ಈ ದಿನಗಳಲ್ಲಿ ನಮ್ಮ ಸಮೀಪಕ್ಕೆ ಬಂದಿರುತ್ತಾನೆ. ಅವನ ಹಕ್ಕುಗಳನ್ನು ಈಡೇರಿಸಿ ಕೊಡುವವರಿಗೂ ಅವನ ಆರಾಧನೆ ಮಾಡುವವರಿಗೂ ಅವನ ದಾಸರ ಹಕ್ಕುಗಳನ್ನು ಈಡೇರಿಸಿಕೊಡುವವರಿಗೂ ಅವನು ಅನುಗ್ರಹ ನೀಡಲು ಬಯಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ನಾವು ವಿನಯಾನ್ವಿತರಾಗಿ ಈ ಎಲ್ಲ ಹಕ್ಕುಗಳನ್ನು ಈಡೇರಿಸಿಕೊಡಲು ವಿಶಿಷ್ಟವಾಗಿ ಶ್ರದ್ಧೆ ನೀಡಬೇಕು. ಈ ದಿನಗಳಲ್ಲಿ ರಮಝಾನಿನ ಒಂದು ವಿಶಿಷ್ಟ ಪರಿಸರವಿರುವುದರಿಂದ ಅದು ಅಲ್ಲಾಹನನ್ನು ಆರಾಧಿಸುವ ಹಕ್ಕನ್ನು ಈಡೇರಿಸಲು ನಮ್ಮ ಗಮನ ಹರಿಸುತ್ತದೆ. ಬೇರೆ ಸತ್ಕರ್ಮ ಮಾಡುವ ಬಗ್ಗೆ ಸಹ ನಮ್ಮ ಗಮನ ಹರಿಸುತ್ತದೆ. ಆದುದರಿಂದ ನಾವು ಈ

ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಅದರ ಪ್ರಯೋಜನ ಪಡೆಯಲು ಪ್ರಯತ್ನಿಸಬೇಕು. ನಮ್ಮ ಆರಾಧನೆಗಳು ಅಲ್ಲಾಹನಿಂದ ಅಂಗೀಕಾರ ಪಡೆಯಬೇಕಾದರೆ, ನಾವು ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸುವ ಆವಶ್ಯಕತೆ ಇದೆ. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ– ಆಕಾಶದಲ್ಲಿ ಅಲ್ಲಾಹನು ನಿಮ್ಮಿಂದ ಸಂಪ್ರೀತನಾಗಬೇಕೆಂದು ನೀವು ಬಯಸುವುದಾದರೆ ನೀವು ಪರಸ್ಪರ ಒಂದೇ ತಾಯಿಯ ಇಬ್ಬರು ಮಕ್ಕಳಂತೆ ಅನ್ಯೋನ್ಯವಾಗಿ ಇರಬೇಕಾಗಿದೆ. ನೀವು ನಿಮ್ಮ ಅಧೀನವಿರುವವರ ಮೇಲೆ, ನಿಮ್ಮ ಪತ್ನಿಯರ ಮೇಲೆ, ನಿಮ್ಮ ಬಡ ಸಹೋದರರ ಮೇಲೆ ದಯೆದೋರಿದರೆ ಆಕಾಶದಲ್ಲಿ ನಿಮ್ಮ ಮೇಲೆ ದಯೆದೋರಿಸಲ್ಪಡುವುದು. ನೀವು ಸತ್ಯವಾಗಿ ದೇವನಿಗೆ ಸೇರಿದವರಾದರೆ ಅವನು ಸಹ ನಿಮ್ಮವನಾಗುವನು.

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಯಾರಾದರೂ ತನ್ನ ಆಯುಸ್ಸನ್ನು ವರ್ಧಿಸಲು ಇಚ್ಛಿಸುವುದಾದರೆ ಅವನು ಒಳ್ಳೆಯ ಕೆಲಸಗಳ ಪ್ರಚಾರ ಮಾಡಬೇಕು. ಮತ್ತು ಅಲ್ಲಾಹನ ಸೃಷ್ಟಿಗಳಿಗೆ ಪ್ರಯೋಜನಕರವಾದ ಕೆಲಸಗಳನ್ನು ಮಾಡಬೇಕು.

ನಾವು ಅಲ್ಲಾಹನನ್ನು ಆರಾಧಿಸುವುದರ ಜೊತೆಗೆ **ಹುಖೂಖುಲ್ ಇಬಾದ್** ಅಂದರೆ ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸುವ ಭಾಗ್ಯವನ್ನು ಸಹ ಅಲ್ಲಾಹನು ನಮಗೆ ದಯಪಾಲಿಸಲಿ. ನಮಗೆ ವಾಸ್ತವಿಕವಾಗಿ ಪರಮ ದಯಾಮಯನಾದ ಅಲ್ಲಾಹನ ಯಥಾರ್ಥ ದಾಸರಾಗುವ ಭಾಗ್ಯ ಲಭಿಸಲಿ. ಈ ರಮಝಾನ್‌ನಲ್ಲಿ ನಾವು ಅಲ್ಲಾಹನ ಸಾಮೀಪ್ಯವನ್ನು ಮೊದಲಿಗಿಂತಲೂ ಹೆಚ್ಚು ಗಳಿಸುವವರಾಗುವ. ಅದನ್ನು ನಮ್ಮ ಜೀವಿತದ ಸ್ಥಿರ ಭಾಗವನ್ನಾಗಿ ಮಾಡಿಕೊಳ್ಳುವವರಾಗೋಣ. ಅಲ್ಲಾಹನು ನಮಗೆ ಆ ಭಾಗ್ಯವನ್ನು ಕರುಣಿಸಲಿ – ಆಮೀನ್.

{ಖುತ್‌ಬದ ಕೊನೆಗೆ ಖಾದಿಯಾನ್‌ನಲ್ಲಿ 4–6–2015 ರಂದು ಮೃತರಾದ ಹಿದಾಯತ್ ಬೀಬಿ (ಮುಹಮ್ಮದ್ ಅಹ್ಮದ್ ಕಾಲಾ ಸಾಹಿಬ್ ಅಫ್‌ಗಾನ್‌ರ ಪತ್ನಿ) ಮತ್ತು ರಬ್ವದಲ್ಲಿ 18–5–2015ರಲ್ಲಿ ಮೃತರಾದ ಮೌಲವಿ ಮುಹಮ್ಮದ್ ಅಹ್ಮದ್ ಸಾಖಿಬ್ ಸಾಹಿಬ್, ಉಸ್ತಾದ್ ಜಾಮಿಅ ಅಹ್ಮದಿಯಾ ರಬ್ವ ಇವರಿಬ್ಬರ ಬಗ್ಗೆ ವಿವರಿಸಿ ನಮಾಝೆ ಜನಾಝ ಗಾಯಿಬ್ ಅನುಷ್ಠಿಸುವುದಾಗಿ ಪ್ರಕಟಿಸಿದರು. ಅವರಿಬ್ಬರಿಗೆ ಮಗ್‌ಫಿರತ್ ಮತ್ತು ಉನ್ನತ ಪದವಿ ಲಭಿಸಲು ಪ್ರಾರ್ಥಿಸಿದರು.}

––––––––––––––*****––––––––––––––

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 26-06-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon